SEVA BHARATHI
सेवा ही परमो धर्मः

ಸಂಪುಟ : 03
ಸಂಚಿಕೆ : 10

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ-2019 ಪುರಸ್ಕೃತ ಸಂಸ್ಥೆ)
ಮಾಸಿಕ e–ನ್ಯೂಸ್ ಲೆಟರ್ – ಡಿಸೆಂಬರ್ 2022

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## ರಾಜ್ಯ ಪ್ರಶಸ್ತಿ – 2022




## ವಿಕಲಚೇತನ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಸಂಸ್ಥೆ

## ಉ.ಕ. ಜಿಲ್ಲೆಯ ಕುಮಟಾದಲ್ಲಿ 2 ದಿನಗಳ ಶಿಬಿರ

**ಸೇವಾಭಾರತಿ ತಂಡದಿಂದ ಡಾ॥ ಡಿ. ವೀರೇಂದ್ರ ಹೆಗ್ಗಡೆ ಭೇಟಿ ಮತ್ತು ಕನ್ಯಾಡಿ ಶ್ರೀಗಳ ಭೇಟಿ**

**ಶಾಸಕ ದಿನಕರ ಶೆಟ್ಟಿಯವರಿಂದ ರೂಪಾಯಿ 50 ಸಾವಿರ ದೇಣಿಗೆ**

**ಬಾರ್ಕೂರು ದಿನೇಶ್ ಶೆಟ್ಟಿ ಅವರ ಜೀವನೋದ್ಯಮ ಯಶೋಗಾಥೆ**

**ಆಶಯ ಕಳೆದುಕೊಂಡವರ ಬಾಳು ಬೆಳಗಿದ ಬತ್ತಿ ಉದ್ಯಮ →**

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ಆರೋಗ್ಯಯುತ ಬದುಕಿಗಾಗಿ ನಮ್ಮ ಹೋರಾಟ ಪ್ರತಿನಿತ್ಯದ್ದಾಗಿದೆ. ಆದರೆ ಈ ಹೋರಾಟದೊಂದಿಗೆ ನನ್ನಂತಹ ಅನೇಕ ಮಂದಿಯು ಇಂದು ಸರಿಯಾದ ಮಾಹಿತಿಗಳಿಲ್ಲದೆ, ಮಾರ್ಗದರ್ಶನಗಳಿಲ್ಲದೆ ಆರ್ಥಿಕವಾಗಿಯೂ ಸಬಲರಲ್ಲದ ಕಾರಣಗಳಿಂದ ಮನೆಯ ಮೂಲೆಯ ಹಾಸಿಗೆಯಲ್ಲಿಯೇ ನರಳುತ್ತಾ ದಿನದೂಡುವ ವಿದ್ಯಾಮಾನವಿದೆ.

ಉತ್ತರಕನ್ನಡ ಕುಮಟಾದಲ್ಲಿ ಈ ತಿಂಗಳು ನಡೆದ 2 ದಿನಗಳ ಉಚಿತ ಶಿಬಿರದಲ್ಲಿ ಇದನ್ನೆಲ್ಲ ಕಣ್ಣಾರೆ ಕಾಣುವಂತಹ ಪರಿಸ್ಥಿತಿ ಅಲ್ಲಿನ ಜನಪ್ರತಿನಿಧಿ ಶಾಸಕರಾದ ದಿನಕರ ಶೆಟ್ಟಿಯವರಿಗೆ ಒದಗಿ ಬಂತು. ಕುಮಟಾ ಮತ್ತು ಹೊನ್ನಾವರ ವ್ಯಾಪ್ತಿಯಲ್ಲಿರುವ 22 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಲ್ಲಿ 7 ಮಂದಿ ಶಿಬಿರದಲ್ಲಿ ಭಾಗವಹಿಸಿದ್ದರು. ಕೆಲವರ ಒತ್ತಡಗಾಯಗಳು ತೀವ್ರತರದಲ್ಲಿ ಇರುವ ಕಾರಣಗಳಿಂದ ಅವರ ಅನುಪಸ್ಥಿತಿ ಇತ್ತು. ಭಾಗವಹಿಸಿದವರಲ್ಲಿ ಅನೇಕರು ಒತ್ತಡ ಗಾಯಗಳಲ್ಲೂ, ಚರ್ಮವಿಕಾರಗಳಲ್ಲೂ, ಕಾಲುಗಳ ಬಿಗಿತನದಿಂದ ಹಾಗೂ ಮಾನಸಿಕ ಒತ್ತಡಗಳಿಂದ ಬಂದಂತಹವರೇ ಆಗಿದ್ದರು.

ಈ ಎಲ್ಲಾ ದ್ವಿತೀಯಾಂತರ ಸಮಸ್ಯೆಗಳನ್ನು ಸ್ವತಃ ದರ್ಶನ ಮಾಡಿದ ಶಾಸಕರು ಮಮ್ಮಲ ಮರುಗಿದ್ದು, ಎಲ್ಲರ ಕಣ್ಣುಗಳು ತೇವಗೊಳ್ಳಲು ಕಾರಣವಾಯಿತು. ಇವರ ಸೇವೆ ಮಾಡುತ್ತಿರುವ ಸೇವಾಭಾರತಿ ಸಂಸ್ಥೆಗೆ ಅಭಿನಂದನೀಯ ನುಡಿಗಳ ಮೂಲಕ ಶುಭ ಹಾರೈಸಿ ತಾನು ಮುಂದೆಯೂ ಸಹಕಾರ ನೀಡುತ್ತೇನೆಂದು ತಿಳಿಸಿ ಸ್ಥಳದಲ್ಲಿ ರೂಪಾಯಿ 50 ಸಾವಿರ ದೇಣಿಗೆ ನೀಡಿದರು. ಇದಕ್ಕೆ ಪ್ರತಿಯಾಗಿ ಆ ಭಾಗದ ಎಲ್ಲಾ ದಿವ್ಯಾಂಗರನ್ನು ಹಂತಹಂತವಾಗಿ ಪುನಶ್ಚೇತನ ಕೊಡಿಸುವುದಾಗಿ ಸಂಸ್ಥೆಯಿಂದ ಭರವಸೆ ನೀಡಿದೆವು. ಒಟ್ಟಿನಲ್ಲಿ ಶಿಬಿರ ಸ್ಥಳಾವಕಾಶ ಮತ್ತು ವ್ಯವಸ್ಥೆಗಳನ್ನು ನೀಡಿದ ಕೆನರಾ ಹೆಲ್ತ್ ಕೇರ್ ಸೆಂಟರ್‌ನ ಡಾ। ಜಿ.ಜಿ. ಹೆಗಡೆ ಶಿಬಿರದ ಯಾವುದೇ ಖರ್ಚನ್ನು ಸ್ವೀಕರಿಸದೇ ಪೂರ್ತಿಯಾಗಿ ಉಚಿತ ಮಾಡಿದ್ದು, ಅವರ ಮಾನವೀಯತೆಯನ್ನು ಎತ್ತಿ ತೋರಿಸಿತ್ತು. ನರ್ಸಿಂಗ್ ಸಿಬ್ಬಂದಿಗಳೂ ತಮ್ಮಿಂದಾದ ಧನಸಹಾಯ ನೀಡಿ ಶಿಬಿರದ ಯಶಸ್ಸಿಗೆ ಕಾರಣೀಕರ್ತರಾದರು. ಸ್ಥಳೀಯ ಸಂಸ್ಥೆಗಳೂ, ಕೊಡುಗೈ ದಾನಿಗಳೂ, ಸಮಾಜಸೇವಕರ ಭಾಗವಹಿಸುವಿಕೆ ಮತ್ತು ಸಹಾಯಹಸ್ತಗಳು ನಮ್ಮ ಪ್ರಾಮಾಣಿಕ ಪರಿಶ್ರಮಕ್ಕೆ ದೊರೆತ ಪ್ರಯತ್ನಗಳಾಗಿದ್ದವು.

॥ ಸೇವಾ ಹಿ ಪರಮೋ ಧರ್ಮಃ ॥

ಇತೀ ತಮ್ಮವ,
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಜಿಲ್ಲಾ ಕಚೇರಿ :**

ಸೇವಾನಿಕೇತನ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿ
ಹೆರ್ಗ, ಉಡುಪಿ ತಾಲೂಕು – 576 107
ಮೊ.: 9606044893

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

ಶ್ರೀ ಕೆ. ವಿನಾಯಕ ರಾವ್ – ಅಧ್ಯಕ್ಷರು
ಶ್ರೀ ಕೆ. ಯು. ಗಿರೀಶ್ ರಾವ್ – ಉಪಾಧ್ಯಕ್ಷರು
ಶ್ರೀಮತಿ ಸ್ವರ್ಣಗೌರಿ – ಕಾರ್ಯದರ್ಶಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ – ಖಜಾಂಚಿ
ಶ್ರೀ ಕೆ. ಬಾಲಕೃಷ್ಣ – ಟ್ರಸ್ಟಿ

## ಸಲಹಾ ಮಂಡಳಿ

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಶ್ರೀಮತಿ ಮನೋರಮ ಭಟ್
ಶ್ರೀ ಉದಯಶಂಕರ್
ಶ್ರೀ ಹರೀಶ್ ಟಿ. ಪಿ.
ಶ್ರೀ ಗೋಪಾಲ ಕೆ. ವಿ.
ಶ್ರೀ ವಿಷ್ಣು ಪ್ರಸಾದ್ ತೆಂಕಿಲ್ಲಾಯ
ಶ್ರೀಮತಿ ಜೊಯ್ಸ್ ಪಿರೇರಾ

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

## ನಿರ್ದೇಶಕರು

ಶ್ರೀ ರಾಯನ್ ಫೆರ್ನಾಂಡಿಸ್
ಶ್ರೀ ವಿಜಯ ಕೊಡವೂರು
ಡಾ. ಮುರಳೀಧರ ನಾಯಕ್

# 18ನೇ ಉಚಿತ ವಸತಿಯುತ 2 ದಿನಗಳ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ – ಕುಮಟಾ









ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಕೆನರಾ ಹೆಲ್ತ್‌ಕೇರ್ ಸೆಂಟರ್‌ನಲ್ಲಿ 18ನೇ ಉಚಿತ ವಸತಿಯುತ 2 ದಿನಗಳ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ ನಡೆಯಿತು. ಶಿಬಿರದ ಉದ್ಘಾಟಕರಾಗಿ ಆಗಮಿಸಿದ ಕುಮಟಾ–ಹೊನ್ನಾವರ ಶಾಸಕರಾದ ದಿನಕರ ಶೆಟ್ಟಿ ಸೇವಾಭಾರತಿ ಸಂಸ್ಥೆಯ ಸೇವಾಧಾಮದ ಮೂಲಕ ಮಾಡುತ್ತಿರುವ ದಿವ್ಯಾಂಗರ ಸೇವೆಯನ್ನು ಪ್ರಶಂಶಿಸಿ ನಮ್ಮ ತಾಲೂಕಿ ನಲ್ಲಿರುವ ದಿವ್ಯಾಂಗರಿಗೆ ಈ ಶಿಬಿರ ಸದುಪಯೋಗ ವಾಗಲಿ ಎಂದು ಶುಭ ಹಾರೈಸಿ ರೂಪಾಯಿ 50000/– ದೇಣಿಗೆ ನೀಡಿ ದರು. ಸೇವಾಭಾರತಿಯ ಅಧ್ಯಕ್ಷರಾದ ಕೆ.ವಿನಾಯಕ ರಾವ್ ಅಧ್ಯಕ್ಷತೆ ವಹಿಸಿ ಸೇವಾಧಾಮದ ಕಾರ್ಯ ಚಟುವಟಿಕೆಗಳ ಬಗ್ಗೆ ಸವಿವರ ನೀಡಿದರು.

ವೇದಿಕೆಯಲ್ಲಿ ಸ್ಥಳೀಯ ಮುಖಂಡರಾದ ಡಾ। ಸುರೇಶ್ ಹೆಗ್ಡೆ, ಡಾ। ಜಿ.ಜಿ.ಹೆಗ್ಡೆ, ರೋಟರಿ ಕ್ಲಬ್‌ನ ಕಾರ್ಯದರ್ಶಿ ಡಾ। ನಾಗರಾಜ ಭಟ್, ಡಾ। ಸಚಿನ್ ನಾಯ್ಕ, ಸೇವಾಧಾಮದ ನಿರ್ದೇಶಕರಾದ ರಾಯನ್ ಫೆರ್ನಾಂಡಿಸ್, ಶಿರಸಿಂಯ ರಾಜೇಶ್ ನಾಯ್ಕ್ ಉಪಸ್ಥಿತರಿದ್ದು, ಫಲಾನುಭವಿಗಳಿಗೆ ಹರಸಿದರು.

ಒಟ್ಟು ಕುಮಟಾ ಮತ್ತು ಹೊನ್ನಾವರ ತಾಲೂಕಿನ 7 ಮಂದಿ ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರು ಈ ಎರಡು ದಿನಗಳ ಶಿಬಿರದಲ್ಲಿ ಭಾಗವಹಿಸಿದ್ದರು. ಹಲವರಿಗೆ ಗಾಲಿಕುರ್ಚಿಗಳನ್ನು, ಮೆಡಿಕಲ್ ಕಿಟ್‌ಗಳನ್ನು, ಸೆಲ್ಫ್‌ಕೇರ್ ಕಿಟ್‌ಗಳನ್ನು ಗಣ್ಯರ ಮೂಲಕ ಉಚಿತವಾಗಿ ವಿತರಿಸಲಾಯಿತು.

ಶಿಬಿರದ ಯಶಸ್ಸಿಗೆ ಕೆನರಾ ಹೆಲ್ತ್‌ಕೇರ್ ಸೆಂಟರ್, ಕುವೈಟ್‌ನ ತುಳುಕೂಟ ಹಾಗೂ ಸ್ಥಳೀಯ ಕೊಡುಗೈ ದಾನಿಗಳು ಸಹಕರಿಸಿರುವುದು ಉಲ್ಲೇಖನೀಯ ಸಂಗತಿ. ಸಮಾರೋಪ ಸಮಾರಂಭದಲ್ಲಿ ಕುಮಟಾದ ಟಿ.ಹೆಚ್.ಓ.ದ ವೈದ್ಯಾಧಿಕಾರಿ ಡಾ. ಅಜ್ಞಾ ನಾಯಕ್, ಕೆನರಾ ಹೆಲ್ತ್ ಕೇರ್ ಸೆಂಟರ್‌ನ ಡಾ. ಸತೀಶ್‌ಪ್ರಭು, ಉತ್ತರ ಕನ್ನಡ ಜಿಲ್ಲಾ ಸೇವಾಭಾರತಿಯ ಪ್ರಮುಖರಾದ ಮೋಹನ್ ಗುನಗ್ ಉಪಸ್ಥಿತರಿದ್ದರು. ಸಿಬ್ಬಂದಿಗಳಾದ ಆಶ್ರಿತ್ ಸಿ.ಪಿ. ಮತ್ತು ಪುರುಷೋತ್ತಮ ಮರಾಠಿ ಸಂಯೋಜಿಸಿದರು.

## ದಾನಿಗಳು



21-12-2022 ರಂದು ಉಡುಪಿಯ ತುಳುನಾಡ ಧ್ವನಿ ವಾಹಿನಿಯ ಮಾಲಕಿಯಾದ ಯಶೋಧ ಕೇಶವರವರು ತಮ್ಮ ಕುಟುಂಬದೊಂದಿಗೆ ಆಗಮಿಸಿ ಸೇವಾಧಾಮದ ಸನಿವಾಸಿಗಳಿಗೆ ಹಣ್ಣುಹಂಪಲುಗಳನ್ನು ನೀಡಿ ಶುಭಹಾರೈಸಿ, ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂಪಾಯಿ 5000/– ದೇಣಿಗೆ ನೀಡಿರುತ್ತಾರೆ. ಸಂಸ್ಥೆಯು ಕೃತಜ್ಞತೆ ಸಲ್ಲಿಸಿರುತ್ತದೆ.



ದಿನಾಂಕ 20-12-2022 ರಂದು ನಮ್ಮ ಸಂಸ್ಥೆಯ ಸಲಹಾಮಂಡಳಿಯ ಸದಸ್ಯರಾದ ಬೆಂಗಳೂರಿನ ಹರೀಶ್ ಟಿ.ಪಿ.ಯವರು ನಮ್ಮ ಕೇಂದ್ರಕ್ಕೆ ಆಗಮಿಸಿ ಸನಿವಾಸಿಗಳೊಂದಿಗೆ ಮಾತುಕತೆ ನಡೆಸಿ ಅವರಿಗೆ ಪ್ರೇರಣೆ ತುಂಬಿ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂಪಾಯಿ 10,000/– ದೇಣಿಗೆ ನೀಡಿರುತ್ತಾರೆ. ಸಂಸ್ಥೆಯು ಶ್ರೀಯುತರ ಕುಟುಂಬಕ್ಕೆ ಕೃತಜ್ಞತೆ ವ್ಯಕ್ತಪಡಿಸಿರುತ್ತದೆ.

ಡಿಸೆಂಬರ್ 4 ರಂದು ಉಡುಪಿಯ ಬ್ರಹ್ಮಗಿರಿಯಲ್ಲಿ ಕಾರ್ಯಾಚರಿಸುತ್ತಿರುವ ಕೆನರಾ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ(ನಿ) ಸೇವಾಭಾರತಿಯ ಸೇವಾಧಾಮದ ಕಾರ್ಯ ಚಟುವಟಿಕೆಗಳಿಗೆ ರೂ. 30,000/–ಗಳನ್ನು ಮೆಡಿಕಲ್ ಕಿಟ್‌ಗಳಿಗಾಗಿ ನೀಡಿತು.

## ಡಿಸೆಂಬರ್ ತಿಂಗಳಿನಲ್ಲಿ ದೇಣಿಗೆ ನೀಡಿದ ಸಂಘ ಸಂಸ್ಥೆಗಳು

| | |
|---|---|
| ಕುವೈಟ್ ಕೆನರಾ ವೆಲ್‌ಫೇರ್ ಅಸೋಸಿಯೇಷನ್, ಕುವೈಟ್ | – 1,00,000 |
| ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು | – 50,000 |
| ಕೆನರಾ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್, ಬ್ರಹ್ಮಗಿರಿ ಉಡುಪಿ | – 30,000 |
| ಯುರೋಲಜಿ ಅಂಡ್ ಫಿಲೊಂತ್ರೋಪಿ ಟ್ರಸ್ಟ್, ಬೆಂಗಳೂರು | – 20,000 |
| ಲಯನ್ಸ್ ಕ್ಲಬ್, ಕುಮಟಾ | – 8,000 |
| ಕ್ರೈಸ್ಟ್ ಅಕಾಡೆಮಿ, ಮುಂಡಾಜೆ | – 5,000 |

## ಮಹನೀಯ ದಾನಿಗಳು

| | |
|---|---|
| ಶ್ರೀ ದಿನಕರ ಶೆಟ್ಟಿ, ಶಾಸಕರು, ಕುಮಟಾ–ಹೊನ್ನಾವರ | – 50,000 |
| ಶ್ರೀ ಗಣೇಶ್ ಐತಾಳ್, ಕೊಕ್ಕಡ | – 25,000 |
| ಶ್ರೀ ವಿಘ್ನೇಶ್ ರಾಜ, ತಮಿಳುನಾಡು | – 15,000 |
| ಕೆ. ಪುರಂದರ ರಾವ್, ದೊಂಡೋಲೆ, ಧರ್ಮಸ್ಥಳ | – 15,000 |
| ಶ್ರೀ ಅರುಣ ಪುರುಷೋತ್ತಮ ಕಾಮತ್, ಕುಮಟಾ | – 11,216 |
| ಶ್ರೀ ವೈಭವ್ ವಿ. ರಾವ್, ಮುಂಬೈ | – 10,000 |
| ಶ್ರೀ ಹರೀಶ್ ಟಿ.ಪಿ, ಬೆಂಗಳೂರು | – 10,000 |
| ಶ್ರೀ ಕಿಶನ್, ಪಡುಬಿದ್ರಿ | – 10,000 |
| ಶ್ರೀಮತಿ ಜಯಂತಿ ಪುರಂದರ, ದೊಂಡೋಲೆ, ಧರ್ಮಸ್ಥಳ | – 10,000 |
| ಶ್ರೀ ದಾಸರಂಗ ಶಾನಭಾಗ್, ಕುಮಟಾ | – 6,100 |
| ಡಾ. ಸತೀಶ್‌ಪ್ರಭು, ಕುಮಟಾ | – 5,000 |
| ಶ್ರೀಮತಿ ಯಶೋಧಾ ಕೇಶವ್, ಉಡುಪಿ | – 5,000 |
| ಶ್ರೀಮತಿ ವನಿತಾ, ಆಸ್ಟ್ರೇಲಿಯಾ | – 5,000 |
| ಶ್ರೀ ಶ್ರೇಯಾಂಕ್ ಶೆಟ್ಟಿ, ಉಜಿರೆ | – 5,000 |
| ಶ್ರೀಮತಿ ಶಕುಂತಲಾ ಎಂ.ರಾವ್, ಮಂಗಳೂರು | – 5,000 |
| ಶ್ರೀ ಚಂದ್ರಶೇಖರ ಭಟ್, ನಿಡ್ಲೆ | – 3,000 |
| ಶ್ರೀ ಮುರಳೀಧರ ಪ್ರಭು, ಕುಮಟಾ | – 2,000 |
| ಶ್ರೀ ಅಬ್ದುಲ್ ಸಲೀಂ, ಗುರುವಾಯನಕೆರೆ | – 2,000 |
| ಶ್ರೀ ರಾಕೇಶ್ ಹೆಚ್.ಸಿ, ಚಿಕ್ಕಮಗಳೂರು | – 2,000 |
| ಶ್ರೀ ಶೈಲೇಂದ್ರ ರಾವ್, ಕಾರ್ಕಳ | – 1,000 |
| ಶ್ರೀಮತಿ ಸುಲೋಚನಾ, ನೆಲ್ಯಾಡಿ | – 1,000 |
| ಶ್ರೀ ಕೆ.ಎಲ್.ಸುರೇಶ್, ಚಿಕ್ಕಮಗಳೂರು | – 1,000 |
| ಶ್ರೀ ವಿಕ್ರಮ್, ಮೈಸೂರು | – 100 |

*When everyone else says you can't determination says, YES YOU CAN'*

## ಆಸ್ಟ್ರೇಲಿಯಾ ನಿವಾಸಿಯಿಂದ ದೇಣಿಗೆ



ದಿನಾಂಕ 15 ರಂದು ಶ್ರೀಮತಿ ವನಿತಾ ಮತ್ತು ಅವರ ಕುಟುಂಬವು ಕೇಂದ್ರಕ್ಕೆ ಆಗಮಿಸಿ, ಕೇಂದ್ರದ ಚಟುವಟಿಕೆಗಳನ್ನು ತಿಳಿದುಕೊಂಡು ಸನಿವಾಸಿಗಳಿಗೆ ಶುಭ ಹಾರೈಸಿ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂಪಾಯಿ 5000/– ನೀಡಿರುತ್ತಾರೆ. ಸಮಿತಿಯು ಅವರೆಲ್ಲರಿಗೂ ಕೃತಜ್ಞತೆ ವ್ಯಕ್ತಪಡಿಸಿರುತ್ತದೆ.




ಡಿಸೆಂಬರ್ 5 ರಂದು ನಮ್ಮ ಸಂಸ್ಥೆಯ ಹಿತೈಷಿಗಳಾದ ಕೊಕ್ಕಡದ ಗಣೇಶ್ ಪಿ.ಐತಾಳ್‌ರವರು ಪ್ರತಿ ವರ್ಷದಂತೆ ಈ ವರ್ಷವೂ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂಪಾಯಿ 25000/– ಚೆಕ್‌ನ್ನು ನೀಡಿ ಸಂಸ್ಥೆಗೆ ಶುಭ ಹಾರೈಸಿದರು.

## ಆಶ್ಲೇಷಾ ಬಲಿ ಮತ್ತು ದುರ್ಗಾಪೂಜೆ

ಪ್ರತಿವರ್ಷದಂತೆ ಈ ವರ್ಷವೂ ಕನ್ಯಾಡಿಯ ಸೇವಾನಿಕೇತನದಲ್ಲಿ ಆಶ್ಲೇಷಾ ಬಲಿ ಮತ್ತು ಶ್ರೀ ದುರ್ಗಾಪೂಜೆಯು ವಿಧಿವತ್ತಾಗಿ ದಿನಾಂಕ 2–12–2022 ರಂದು ನಡೆಯಿತು.

ಗಣ್ಯರು, ಸುತ್ತಮುತ್ತಲ ಭಗವದ್ಭಕ್ತರು, ಸಮಿತಿಯ ಕಾರ್ಯಕರ್ತರು ಭಾಗವಹಿಸಿ ದೇವರ ಕೃಪೆಗೆ ಭಾಜನರಾದರು.

## ಸೇವಾನಿಧಿ ದಾನಿಗಳು

| | |
|---|---|
| ಶ್ರೀ ಮಧ್ವಮೂರ್ತಿ ಎಂ, ಉಡುಪಿ | – 5,000 |
| ಶ್ರೀ ಕೆ.ವಿನಾಯಕ ರಾವ್, ಕನ್ಯಾಡಿ | – 4,000 |
| ಶ್ರೀ ಲಕ್ಷ್ಮೀನಾರಾಯಣ ರಾವ್, ಧರ್ಮಸ್ಥಳ | – 2,000 |
| ಶ್ರೀ ಗುರುರಾಜ್, ಕನ್ಯಾಡಿ | – 1,000 |
| ಶ್ರೀ ಜಿ.ವಿಜಯ ಗೌಡ, ಉಜಿರೆ | – 1,000 |
| ಶ್ರೀ ಶ್ರೀಧರ ಕೆ.ವಿ, ಉಜಿರೆ | – 1,000 |
| ಮಾಸ್ಟರ್ ಅದ್ವೈತ್, ಕನ್ಯಾಡಿ | – 500 |
| ಡಾ. ರಾಮಕೃಷ್ಣ ಭಟ್ ಜಿ.ಎನ್, ಕನ್ಯಾಡಿ | – 500 |
| ಶ್ರೀ ಕಾರ್ತಿಕ್, ನೇತ್ರಾವತಿ | – 500 |
| ಶ್ರೀಮತಿ ಬಬಿತಾ, ಕನ್ಯಾಡಿ | – 500 |
| ಶ್ರೀ ಪುರುಷೋತ್ತಮ ಡಿ.ಎ., ಧರ್ಮಸ್ಥಳ | – 500 |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್, ಕಲ್ಮಂಜ | – 500 |
| ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ | – 500 |
| ಶ್ರೀಮತಿ ಛಾಯಾ ಸಿ.ಎಸ್, ಉಜಿರೆ | – 500 |
| ಶ್ರೀ ಈಶ್ವರ ಭಟ್, ಉಜಿರೆ | – 500 |
| ಶ್ರೀ ಶಿವಕುಮಾರ, ಹಳೇಪೇಟೆ, ಉಜಿರೆ | – 500 |
| ಶ್ರೀ ಮಧುಸೂದನ್, ಉಜಿರೆ | – 500 |
| ಶ್ರೀ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ | – 500 |
| ಶ್ರೀ ದೇವದಾಸ ಪ್ರಭು, ಕನ್ಯಾಡಿ | – 500 |
| ಶ್ರೀ ರಜತ್ ಕುಮಾರ್ ಜೆ.ಸಿ., ವೇಣೂರು | – 300 |
| ಶ್ರೀ ಜಯಾನಂದ ಎಂ, ಕನ್ಯಾಡಿ | – 250 |
| ಶ್ರೀ ಬಿ. ಪುರಂದರ ನಾರ್ಯ, ಧರ್ಮಸ್ಥಳ | – 200 |

ಉದಯವಾಣಿ

### ಸೇವಾಭಾರತಿ: ಡಾ| ಹೆಗ್ಗಡೆ ಭೇಟಿ



**ಬೆಳ್ತಂಗಡಿ, ಡಿ. 13:** ಇತ್ತೀಚೆಗೆ ವಿಶ್ವ ವಿಕಲಚೇತನರ ದಿನಾಚರಣೆ 2022ರ ಸಂದರ್ಭದಲ್ಲಿ ಕರ್ನಾಟಕ ಸರಕಾರದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಸೇವಾಭಾರತಿ ಸಂಸ್ಥೆಗೆ ವಿಕಲಚೇತನರ ಕ್ಷೇತ್ರದಲ್ಲಿ ಸಂಸ್ಥೆಯ ವಿಶೇಷ ಸಾಧನೆಯನ್ನು ಪರಿಗಣಿಸಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತ್ತು.

ಸೇವಾಭಾರತಿಯ ಸಮಿತಿ ಆ ಪ್ರಯುಕ್ತ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ| ಡಿ. ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಧರ್ಮಾಧಿಕಾರಿಗಳು ಸೇವಾಭಾರತಿ ಸಂಸ್ಥೆಯ ಸಾಧನೆಯನ್ನು ಪ್ರಶಂಸಿಸಿ ಸಂಸ್ಥೆಗೆ ಮಂಜುನಾಥ ಸ್ವಾಮಿಯ ಪದಕ ಮತ್ತು ಶಾಲು ನೀಡಿ ಆಶೀರ್ವದಿಸಿದರು.

ಸೇವಾಭಾರತಿ ಅಧ್ಯಕ್ಷ ಕೆ.ವಿನಾಯಕ ರಾವ್, ಕಾರ್ಯದರ್ಶಿ ಸ್ವರ್ಣ ಗೌರಿ, ಟ್ರಸ್ಟಿ ಬಿ.ಕೃಷ್ಣಪ್ಪ ಗುಡಿಗಾರ, ಸಿಬಂದಿ ಮೋಹನ್ ಎಸ್., ಚರಣ್ ಕುಮಾರ್ ಎಂ., ಅಖಿಲೇಶ್ ಎ. ಮತ್ತಿತರರು ಉಪಸ್ಥಿತರಿದ್ದರು.

**ಕನ್ಯಾಡಿ ಸ್ವಾಮೀಜಿ ಭೇಟಿ**

ಕನ್ಯಾಡಿ ರಾಮಕ್ಷೇತ್ರದ ಪೀಠಾಧೀಶ ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆಯಲಾಯಿತು.

## ಕೇಂದ್ರಕ್ಕೆ ಭೇಟಿ

### ಡಾ। ಡಿ. ವೀರೇಂದ್ರ ಹೆಗ್ಗಡೆಯವರ ಭೇಟಿ



ಈ ವರ್ಷದ ವಿಶ್ವ ಅಂಗವಿಕಲ ದಿನಾಚರಣೆ 2022ರ ಸಂದರ್ಭದಲ್ಲಿ ರಾಜ್ಯ ಸರ್ಕಾರ ಸೇವಾಭಾರತಿ ಸಂಸ್ಥೆಯನ್ನು ವಿಕಲಚೇತನರ ಕ್ಷೇತ್ರದಲ್ಲಿ ಮಾಡಿದ ವಿಶೇಷ ಸಾಧನೆಗಳನ್ನು ಪರಿಗಣಿಸಿ ರಾಜ್ಯಪ್ರಶಸ್ತಿ ನೀಡಿ ಗೌರವಿಸಿತ್ತು.

ಆ ಪ್ರಯುಕ್ತ ಸೇವಾಭಾರತಿಯ ಸಮಿತಿ ಸದಸ್ಯರು, ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ। ಡಿ. ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಧರ್ಮಾಧಿಕಾರಿಗಳು ಸಮಿತಿಯ ಸಾಧನೆಗಳನ್ನು ಪ್ರಶಂಶಿಸಿ ಸಂಸ್ಥೆಗೆ ಮಂಜುನಾಥ ಸ್ವಾಮಿಯ ಪದಕ ಮತ್ತು ಶಾಲು ನೀಡಿ ಆಶೀರ್ವದಿಸಿದರು.

ತಂಡದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಕೆ.ವಿನಾಯಕ ರಾವ್, ಕಾರ್ಯದರ್ಶಿ ಸ್ವರ್ಣಗೌರಿ, ಖಜಾಂಚಿ ಬಿ.ಕೃಷ್ಣಪ್ಪ ಗುಡಿಗಾರ್, ಸಿಬ್ಬಂದಿಗಳಾದ ಚರಣ್‌ಕುಮಾರ್, ಮೋಹನ್ ಎಸ್., ಅಖಿಲೇಶ್ ಎ. ಉಪಸ್ಥಿತರಿದ್ದರು.

### ಸರಕಾರಿ ಪ್ರಥಮ ದರ್ಜೆ ಕಾಲೇಜ್‌ನ ಬಿಎಸ್‌ಡಬ್ಲ್ಯೂ ವಿದ್ಯಾರ್ಥಿಗಳ ಭೇಟಿ

ಅಧ್ಯಯನ ನಿಮಿತ್ತ ಉಪ್ಪಿನಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಸೇವಾಧಾಮಕ್ಕೆ ಭೇಟಿ ನೀಡಿ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿದುಕೊಂಡರು.

ವಿದ್ಯಾರ್ಥಿಗಳೊಂದಿಗೆ ಪ್ರಾಧ್ಯಾಪಕರಾದ ನಂದೀಶ್ ವೈ.ಡಿ., ಸ್ಥಳೀಯರಾದ ಕಲ್ಮಂಜದ ಸಾಂತಪ್ಪ ಉಪಸ್ಥಿತ ರಿದ್ದರು.

### ಮಂಗಳೂರಿನಿಂದ ಕೆಎಂಸಿ ವೈದ್ಯರ ಭೇಟಿ

ತಿಂಗಳಿಗೊಂದು ಬಾರಿ ಯೋಜಿತ ರೀತಿಯಂತೆ ಈ ತಿಂಗಳ 10ನೇ ತಾರೀಖಿನಂದು ಸೇವಾಧಾಮಕ್ಕೆ ಕೆಎಂಸಿ ಮಂಗಳೂರಿನ ಪಿಎಂಆರ್ ವಿಭಾಗದ ಡಾ. ಅ್ಯನ್ ಭೇಟಿ ನೀಡಿ ಸನಿವಾಸಿಗಳ ಆರೋಗ್ಯ ತಪಾಸಣೆ ನಡೆಸಿ, ಸಲಹೆ ನೀಡಿದರು. ಕೇಂದ್ರದಲ್ಲಿ 10 ಮಂದಿ ದಿವ್ಯಾಂಗರು ಈ ಪ್ರಯೋಜನ ಪಡೆದರು.

### ಆಪ್ತ ಸಮಾಲೋಚಕರ ಭೇಟಿ




ದಿನಾಂಕ 15ರಂದು ಕೇಂದ್ರಕ್ಕೆ ಉಡುಪಿಯ ಮಂಜುಳಾ ವಿಷ್ಣುಪ್ರಸಾದ್ ಆಗಮಿಸಿ ದಿವ್ಯಾಂಗರಿಗೆ ಮತ್ತು ಅವರ ಪೋಷಕರಿಗೆ ಆಪ್ತ ಸಮಾಲೋಚನೆ ನೀಡಿದರು.

### ಉಪ್ಪಿನಂಗಡಿ ಸರಕಾರಿ ಕಾಲೇಜಿನ ವಿದ್ಯಾರ್ಥಿಗಳ ಭೇಟಿ ಮತ್ತು ದೇಣಿಗೆ ಹಸ್ತಾಂತರ




ದಿನಾಂಕ 16ರಂದು ಮುಂಡಾಜೆಯ ಕ್ರೈಸ್ಟ್ ಅಕಾಡೆಮಿಯ ವಿದ್ಯಾರ್ಥಿಗಳು ಅಧ್ಯಾಪಕರೊಂದಿಗೆ ಕೇಂದ್ರಕ್ಕೆ ಭೇಟಿ ನೀಡಿ ದಿವ್ಯಾಂಗರೊಂದಿಗೆ ಕ್ರಿಯಾತ್ಮಕ ಚಟುವಟಿಕೆಗಳನ್ನು ನಡೆಸಿದರು. ಮತ್ತು ಸೇವಾಧಾಮದ ಕಾರ್ಯಚಟುವಟಿಕೆಗಳಿಗಾಗಿ ರೂಪಾಯಿ 5000/– ದೇಣಿಗೆ ನೀಡಿದರು.

ಸಮಿತಿಯು ಅವರೆಲ್ಲರಿಗೂ ಕೃತಜ್ಞತೆಗಳನ್ನು ವ್ಯಕ್ತಪಡಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿರುತ್ತದೆ.

## ಕನ್ಯಾಡಿ ಶ್ರೀಗಳ ಭೇಟಿ

ಡಿಸೆಂಬರ್ 3 ರಂದು ಬೆಂಗಳೂರಿನಲ್ಲಿ ನಡೆದ ವಿಶ್ವ ಅಂಗವಿಕಲರ ದಿನಾಚರಣೆ–2022ರ ಸಂದರ್ಭದಲ್ಲಿ ಸೇವಾಭಾರತಿಯ ವಿಕಲಚೇತನರ ಕ್ಷೇತ್ರದಲ್ಲಿ ಮಾಡಿದ ವಿಶೇಷ ಸಾಧನೆಗಳನ್ನು ಪರಿಗಣಿಸಿ ರಾಜ್ಯಪ್ರಶಸ್ತಿ ನೀಡಿ ಗೌರವಿಸಿತ್ತು.

ಆ ಪ್ರಯುಕ್ತ ಸಮಿತಿಯ ಸದಸ್ಯರು ಕನ್ಯಾಡಿ ರಾಮಕ್ಷೇತ್ರದ ಶ್ರೀಶ್ರೀಶ್ರೀ ಬ್ರಹ್ಮಾನಂದ ಸ್ವಾಮೀಜಿಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದುಕೊಂಡರು.

ತಂಡದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಕೆ.ವಿನಾಯಕ ರಾವ್, ಕಾರ್ಯದರ್ಶಿ ಸ್ವರ್ಣಗೌರಿ, ಖಜಾಂಚಿ ಕೆ.ಕೃಷ್ಣಪ್ಪ ಗುಡಿಗಾರ್, ಸಿಬ್ಬಂದಿಯಾದ ಸಿ.ಪಿ. ಆಶ್ರಿತ್ ಉಪಸ್ಥಿತರಿದ್ದರು.

## ಶೀರೂರು ಮಠದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರಿಂದ ಸೇವಾಧಾಮ ಭೇಟಿ




ದಿ: 30–12–2022ರಂದು ಸೇವಾಧಾಮಕ್ಕೆ ಭೇಟಿ ನೀಡಿದ ಶೀರೂರು ಮಠಾಧೀಶರಾದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು, ಸೇವಾಭಾರತಿ ಸೇವಾಕಾರ್ಯಗಳ ಬಗ್ಗೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ ವಿನಾಯಕ ರಾವ್‌ರವರಿಂದ ಮಾಹಿತಿ ಪಡೆದು ಸೇವಾಧಾಮದ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇತ್ತೀಚೆಗೆ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ವಿಕಲಚೇತನರ ಕ್ಷೇತ್ರದಲ್ಲಿ ಸಂಸ್ಥೆಯು ಮಾಡಿದ ವಿಶೇಷ ಸಾಧನೆಯನ್ನು ಗುರುತಿಸಿ ರಾಜ್ಯ ಪ್ರಶಸ್ತಿ ನೀಡಿರುವ ಕುರಿತು ಹೆಮ್ಮೆ ಮತ್ತು ಸಂತೋಷ ವ್ಯಕ್ತಪಡಿಸಿ ಸೇವಾಭಾರತಿ ತಂಡಕ್ಕೆ ಶುಭಹಾರೈಸಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಆರೋಗ್ಯವನ್ನು ಹಾರೈಸಿದರು.

## ರಕ್ತದಾನ ಶಿಬಿರ

ಡಿಸೆಂಬರ್ 10 ರಂದು ಪ್ರಸನ್ನ ಆಯುರ್ವೇದ ಕಾಲೇಜು, ಬೆಳ್ತಂಗಡಿಯ ನೇತೃತ್ವದಲ್ಲಿ ರೋಟರಿ ಕ್ಲಬ್, ಬೆಳ್ತಂಗಡಿ; ದ.ಕ. ಔಷಧ ವ್ಯಾಪಾರಸ್ಥರ ಸಂಘಗಳ ಸಹಕಾರದಲ್ಲಿ ಕಾಲೇಜಿನ ಆವರಣದಲ್ಲಿ ಮಂಗಳೂರಿನ ಕೆಎಂಸಿ ರಕ್ತನಿಧಿಯ ಸಹಕಾರದಲ್ಲಿ ರಕ್ತದಾನ ಶಿಬಿರ ನಡೆಯಿತು. ಒಟ್ಟು 150 ಯೂನಿಟ್ ರಕ್ತ ಸಂಗ್ರಹವಾಯಿತು. ದಾನಿಗಳೆಲ್ಲರಿಗೂ ಆಯೋಜಕರು ಕೃತಜ್ಞತೆ ಸಲ್ಲಿಸಿರುತ್ತಾರೆ.

## ಸಿ.ಎಸ್.ಆರ್. ತಂಡಕ್ಕೆ ನಮ್ಮ ಭೇಟಿ

ಮೈಸೂರು: 16.12.2022 ರಂದು ಮೈಸೂರಿನ ಬ್ಯಾಂಕ್ ನೋಟ್ ಪೇಪರ್ ಮಿಲ್ ಪ್ರೈ. ಲಿಮಿಟೆಡ್ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ ಲಿಮಿಟೆಡ್‌ಗಳ ಸಿಎಸ್‌ಆರ್ ತಂಡಗಳನ್ನು ಸೇವಾಭಾರತಿಯು ಭೇಟಿ ಮಾಡಿ ಸೇವಾಧಾಮದ ಕಾರ್ಯಚಟುವಟಿಕೆಗಳ ಬಗ್ಗೆ ಸವಿವರವಾದ ಮಾಹಿತಿ ನೀಡಿ ಸಹಾಯ ಹಸ್ತ ನೀಡುವಂತೆ ವಿನಂತಿ ಮಾಡಲಾಯಿತು. ಅಧ್ಯಕ್ಷರಾದ ಕೆ.ವಿನಾಯಕರಾವ್ ಮತ್ತು ಸೀನಿಯರ್ ಮ್ಯಾನೇಜರ್ ಚರಣ್‌ಕುಮಾರ್ ಭೇಟಿ ನೀಡಿದ ತಂಡದಲ್ಲಿದ್ದರು.

## ಸೇವಾಧಾಮದಲ್ಲಿ ಹುಟ್ಟುಹಬ್ಬ ಆಚರಣೆ









ಸೇವಾಧಾಮದ ಸಂಚಾಲಕರಾದ ಶ್ರೀ ಕೆ ಪುರಂದರ ರಾವ್ ಅವರು ತಮ್ಮ ಕುಟುಂಬದವರೊಂದಿಗೆ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಭೇಟಿ ನೀಡಿ ಬೆನ್ನುಹುರಿ ಅಪಘಾತ ಕ್ಕೊಳಗಾದ ವ್ಯಕ್ತಿಗಳೊಂದಿಗೆ ಅತ್ಯಂತ ಅರ್ಥಪೂರ್ಣವಾಗಿ ಹುಟ್ಟುಹಬ್ಬವನ್ನು ಆಚರಿಸಿಕೊಂಡರು.

ಅವರು ಫಲಾನುಭವಿಗಳೊಂದಿಗೆ ಮಾತನಾಡಿ, ಹಣ್ಣು ಹಂಪಲು ವಿತರಿಸಿ ಉತ್ತಮ ಆರೋಗ್ಯ ಮತ್ತು ಸಂತೋಷದ ಜೀವನವನ್ನು ಹಾರೈಸಿ ಸೇವಾಧಾಮದ ಸೇವಾ ಚಟುವಟಿಕೆಗಳಿಗೆ ರೂ 25,000/– ದೇಣಿಗೆ ನೀಡಿದರು.

ಈ ಸಂದರ್ಭದಲ್ಲಿ ಸೇವಾಧಾಮಕ್ಕೆ ಭೇಟಿ ನೀಡಿದ ಶೀರೂರು ಮಠದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರ ಆಶೀರ್ವಾದ ಪಡೆದರು.

# ರಾಜ್ಯ ಪ್ರಶಸ್ತಿ – 2022




ಕರ್ನಾಟಕ ರಾಜ್ಯ ಸರಕಾರದ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯು ಸೇವಾಭಾರತಿಯ ಅಂಗವಿಕಲ ಕ್ಷೇತ್ರದಲ್ಲಿ ಮಾಡಿದ ಅತ್ಯುತ್ತಮ ಸೇವೆಗಾಗಿ ಡಿಸೆಂಬರ್ 3 ರಂದು ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ನಡೆದ ವಿಶ್ವ ಅಂಗವಿಕಲ ದಿನಾರಚಣೆ–2022 ಸಂದರ್ಭ ರಾಜ್ಯಪ್ರಶಸ್ತಿಯನ್ನು ನೀಡಿ ಗೌರವಿಸಿತು. ಸಂಸ್ಥೆಯ ಅಧ್ಯಕ್ಷರಾದ ಕೆ.ವಿನಾಯಕ ರಾವ್ ಸೇವಾಭಾರತಿಯ ಪ್ರತಿನಿಧಿಯಾಗಿ ಪ್ರಶಸ್ತಿ ಸ್ವೀಕರಿಸಿದರು. ಮತ್ತು ತಂಡದಲ್ಲಿ ಕಾರ್ಯದರ್ಶಿ ಸ್ವರ್ಣಗೌರಿ, ಸಲಹಾ ಮಂಡಳಿ ಸದಸ್ಯರಾದ ಹರೀಶ ಟಿ.ಪಿ., ಸೀನಿಯರ್ ಮ್ಯಾನೇಜರ್ ಚರಣ್ ಕುಮಾರ್, ಪೋಷಕರಾದ ಕೆ.ವಿವೇಕ್ ರಾವ್ ಉಪಸ್ಥಿತರಿದ್ದರು.



ಉದಯವಾಣಿ

## ಕನ್ಯಾಡಿಯ ಸೇವಾಭಾರತಿ ಸಂಸ್ಥೆಗೆ ರಾಜ್ಯ ಪ್ರಶಸ್ತಿ

ಬೆಳ್ತಂಗಡಿ, ಡಿ. 3: ಸಾಮಾಜಿಕ ಸೇವಾ ಕಾರ್ಯ ಹಾಗೂ ಸಮುದಾಯ ಸೇವೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಕನ್ಯಾಡಿಯ ಸೇವಾ ಭಾರತಿ ಸಂಸ್ಥೆಯು ರಾಜ್ಯ ಸರಕಾರದ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನೀಡುವ ರಾಜ್ಯ ಪ್ರಶಸ್ತಿ ಸ್ವೀಕರಿಸಿದೆ.

ಶನಿವಾರ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ವಿಶ್ವ ವಿಶೇಷಚೇತನ ದಿನಾಚರಣೆಯ ಸಂದರ್ಭದಲ್ಲಿ ರಾಜ್ಯದ ಮುಖ್ಯ ಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು ಹಾಗೂ ವಿಕಲಚೇತನರ ಇಲಾಖೆಯ ಸಚಿವರಾದ ಹಾಲಪ್ಪ ಆಚಾರ್ ಉಪಸ್ಥಿತಿಯಲ್ಲಿ ಕನ್ಯಾಡಿ ಸೇವಾಭಾರತಿಯ ಅಧ್ಯಕ್ಷ ಕೆ. ವಿನಾಯಕ್ ರಾವ್ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಸಂಸ್ಥೆಯ ಕಾರ್ಯದರ್ಶಿ ಸ್ವರ್ಣ ಗೌರಿ, ಸಿಬಂದಿ ಹಿರಿಯ ಪ್ರಬಂಧಕ ಚರಣ್ ಎಂ., ಸಲಹಾ ಸಮಿತಿ ಸದಸ್ಯ ಹರೀಶ್ ಟಿ.ಪಿ., ಸಂಸ್ಥೆಯ ಪೋಷಕರಾದ ಕೆ.ವಿವೇಕ್ ರಾವ್ ಜತೆಗಿದ್ದರು.

ವಿನಾಯಕ ರಾವ್ ಪ್ರಶಸ್ತಿಯನ್ನು ಸ್ವೀಕರಿಸಿದರು.

ಸೇವಾಭಾರತಿ 2004ರಲ್ಲಿ ಕನ್ಯಾಡಿ ವಿನಾಯಕ ರಾವ್ ಸ್ಥಾಪಿಸಿದ ಸರಕಾರೇತರ ಸಂಸ್ಥೆಯಾಗಿದ್ದು 18 ವರ್ಷಗಳಿಂದ ಆರೋಗ್ಯ, ಮಹಿಳಾ ಸಶಕ್ತೀಕರಣ, ಸ್ವ-ಉದ್ಯೋಗದ ಸೇವಾಕಾರ್ಯ ಹಾಗೂ ಸಮುದಾಯ ಸೇವೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಸುಮಾರು 500 ಬೆನ್ನುಹುರಿ ಮುರಿತಕ್ಕೊಳಗಾದವರನ್ನು ಗುರುತಿಸಿ 150 ಮಂದಿಗೆ ಪುನಶ್ಚೇತನವನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಉತ್ತರಕನ್ನಡ, ದ.ಕ., ಚಿಕ್ಕಮಗಳೂರು, ಕಾಸರಗೋಡು, ಕೊಡಗು, ಉಡುಪಿ ಭಾಗಗಳಲ್ಲಿರುವ ಇನ್ನೂ ಅನೇಕ ಬೆನ್ನುಮೂಳೆ ಮುರಿತಕ್ಕೊಳಗಾದವರನ್ನು ಗುರುತಿಸುವ ಕಾರ್ಯ ಸಂಸ್ಥೆಯಿಂದ ನಡೆಯುತ್ತಿದೆ. ಸೇವಾಭಾರತಿಯ ಘಟಕವಾಗಿ 2018ರಿಂದ ಬೆನ್ನುಹುರಿ ಮುರಿತಕ್ಕೊಳಗಾದ ದಿವ್ಯಾಂಗರಿಗಾಗಿ ಸೇವಾಧಾಮ ಹೆಸರಿನ ಪುನಶ್ಚೇತನ ಕೇಂದ್ರವು ಕೊಕ್ಕಡದ ಸೌತಡ್ಕ ಶ್ರೀ ಮಹಾಗಣಪತಿ ಟ್ರಸ್ಟ್‌ನ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

# ಆನ್‌ಲೈನ್ ಕಾರ್ಯಗಾರ




## ಸೇವಾ ಸಂಗಮ ಕಾರ್ಯಾಗಾರದಲ್ಲಿ ಡಾ। ಈಶ್ವರಕೀರ್ತಿ

ಡಿಸೆಂಬರ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಮಂಗಳೂರಿನ ಹೆಸರಾಂತ ವೈದ್ಯರಾದ ಡಾ। ಈಶ್ವರ ಕೀರ್ತಿಯವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಬೆನ್ನುಹುರಿ ಅಪಘಾತಗೊಂಡ ವ್ಯಕ್ತಿಗಳು ಎದುರಿಸುತ್ತಿರುವ ಒತ್ತಡಗಾಯಗಳ ಬಗ್ಗೆ ಬೆಳಕು ಚೆಲ್ಲಿದರು. ಒತ್ತಡಗಾಯಗಳು ಆಗದಂತೆ ವಹಿಸಬೇಕಾದ ಎಚ್ಚರಿಕೆ, ಗಾಯಗಳ ನಿಯಂತ್ರಣ ಮತ್ತು ಗುಣಪಡಿಸುವಿಕೆಗೆ ಅಗತ್ಯ ಕ್ರಮಗಳ ಬಗ್ಗೆ ತಿಳಿ ಹೇಳಿದರು.

ವೈದ್ಯರು ಮಂಗಳೂರಿನ ಕೆಎಂಸಿಯಲ್ಲಿ ಬೆನ್ನುಮೂಳೆ ಶಸ್ತ್ರಕ್ರಿಯೆ ವಿಭಾಗದಲ್ಲಿ ಕನ್ಸಲ್ಟೆಂಟ್ ಸ್ಪೈನ್ ಸರ್ಜನ್ ಆಗಿ ಅಪಾರ ಅನುಭವಿಯಾಗಿ ಜನಮನ್ನಣೆಗೊಳಗಾಗಿದ್ದಾರೆ. ಸೇವಾಧಾಮದ ಕಾರ್ಯಚಟುವಟಿಕೆಗಳ ಬಗ್ಗೆ ಒಲವು ಹೊಂದಿದ ಇವರು ಸೇವಾಧಾಮಕ್ಕೆ ಭೇಟಿ ನೀಡುತ್ತಿರುತ್ತಾರೆ. ಇವರ ಮಾರ್ಗದರ್ಶನದಲ್ಲಿ ಗಾಯಗಳ ಗುಣಪಡಿಸುವಿಕೆಗಾಗಿ ಸೇವಾಧಾಮದ ಸಿಬ್ಬಂದಿಯೋರ್ವರು ಪ್ರಾರಂಭಿಸಿದ ಶುಗರ್ ಟ್ರೀಟ್‌ಮೆಂಟ್ ಎಂಬ ವಿಧಾನದ ಮೂಲಕ ಪರಿಣಾಮಕಾರಿಯಾಗಿ ಗಾಯ ಗುಣಪಡಿಸುವಿಕೆಯ ಪ್ರಯತ್ನ ಸಫಲಗೊಳ್ಳುತ್ತಿರುವುದು ಒತ್ತಡ ಗಾಯವಿರುವ ಫಲಾನುಭವಿಗಳಿಗೆ ಒಂದು ಭರವಸೆಯ ಬೆಳಕಾಗಿದೆ.

ಈ ಕಾರ್ಯಾಗಾರದಲ್ಲಿ ಒಟ್ಟು 62 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.

*The world worries about disability more than disabled people do*

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಮೆಡಿಕಲ್ ಕಿಟ್‌ಗಳು.

**ಆರೋಗ್ಯ ಸ್ಪರ್ಶ** : ಉಡುಪಿ ಜಿಲ್ಲೆಯಲ್ಲಿರುವ ಬೆನ್ನು ಹುರಿ ಅಪಘಾತಗೊಂಡವರಿಗಾಗಿ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಮನೆಮನೆಗಳಿಗೆ ಭೇಟಿ ನೀಡಿ ಆರೋಗ್ಯ ತಪಾಸಣೆ.

**ಸಾಮರ್ಥ್ಯಮ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ವೃತ್ತಿ ತರಬೇತಿಗಳು.

**ಸೇವಾ ಚರಣ್** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಸಾಧನ ಸಲಕರಣೆಗಳ ಸಹಾಯ.

**ಸೇವಾನಿರ್ಮಲ**: ದಿವ್ಯಾಂಗ ಸ್ನೇಹಿ ಶೌಚಾಲಯ ಮತ್ತು ರ್‍ಯಾಂಪ್‌ಗಳಿಗೆ ಭಾಗಶಃ ಧನ ಸಹಾಯ.

**ಆರೋಗ್ಯ ಸಿಂಧು**: ಆರೋಗ್ಯ ತಪಾಸಣೆ ಮಾಹಿತಿ ಹಾಗೂ ತರಬೇತಿಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ದಿನದ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

A/c Holder - M/s. Sevabharathi(R)
A/c No - 120000400920
IFS Code - CNRB0010246
Bank - Canara Bank, Dharmasthala Branch
A/c Type - Current Account

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

**DONATE & JOIN US IN OUR MISSION**

*We are put in situations to build our charactes... not destroy us*

# ಆಶಯ ಕಳೆದುಕೊಂಡವರ ಬಾಳು ಬೆಳಗಿದ ಬತ್ತಿ ಉದ್ಯಮ

## ಬಾರ್ಕೂರು ದಿನೇಶ್ ಶೆಟ್ಟಿ ಅವರ ಜೀವನೋದ್ಯಮ ಯಶೋಗಾಥೆ



**ದೇವರು ನಮ್ಮೊಳಗೆ ಇರುವನು, ಅವನ ಇರುವಿಕೆಯ ಅರಿವು ನಮಗಿರಬೇಕು. ಆ ಇರವಿಕೆಯ ಅರಿವಾಗಲು ಕಾಲ ಕೂಡಿಬರಬೇಕು. ಮನೆ ಮಹಡಿಯಿಂದ ಬಿದ್ದು ಬೆನ್ನುಹುರಿ ಆಪಘಾತ ಕ್ಕೆ ಒಳಗಾಗಿದ್ದ ಬಾರ್ಕೂರು ನಿವಾಸಿ ದಿನೇಶ್ ಶೆಟ್ಟಿ ಅವರ ಜೀವನ ಉರಿಯುತ್ತಿರುವ ಮೇಣದಂತೆ ಕರಗುವ ಸಮಯದಲ್ಲಿ ಬತ್ತಿ ಉದ್ಯಮವು ಜೀವನ ಬೆಳಗಿದ ಸಾಹಸಗಾಥೆ ಇಲ್ಲಿದೆ.**

ದಿನೇಶ್ ಶೆಟ್ಟಿ ಉಡುಪಿ ಜಿಲ್ಲೆ ಬ್ರಹ್ಮಾವರ ತಾಲೂಕು ಬಾರ್ಕೂರು ಹೊಸಳ್ಳಿ ಗ್ರಾಮದ ನಿವಾಸಿ. ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ಛಲ ಹೊಂದಿದ್ದ ಅವರು ಜೀವನೋಪಾಯಕ್ಕಾಗಿ ಕಿರಾಣಿ ಅಂಗಡಿ ಆರಂಭಿಸಿ ಜೀವನ ಭದ್ರತೆ ಕಂಡಿದ್ದರು. ಆದರೆ ವಿಧಿಲಿಖಿತ ಬೇರೆಯದಾಗಿತ್ತು. ಜುಲೈ 1–2018 ರಂದು ಮನೆಯ ಮಹಡಿಯಿಂದ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾಗಿ ಸರ್ವೈಕಲ್ ಇಂಜುರಿಗೆ ಒಳಗಾಗಿದ್ದರು. ನಂತರ ದೈಹಿಕವಾಗಿ ಕುಗ್ಗಿದ ಸ್ಥಿತಿಯಲ್ಲಿದ್ದ ಅವರು ನಾಲ್ಕು ಗೋಡೆಗಳ ಮಧ್ಯೆ ಜೀವನ ಕಳೆಯುವುದು ಸೀಮಿತವಾಗಿತ್ತು.

ಇದಾದ ಕೆಲವು ಸಮಯದ ನಂತರ ಸೇವಾಭಾರತಿ ಸಂಸ್ಥೆಯ ಅಧ್ಯಕ್ಷರಾದ ವಿನಾಯಕ್ ರಾವ್ ಹಾಗೂ ಸಿಬ್ಬಂದಿಯಾದ ಮನು ಆರ್. ಅವರು ಮನೆಗೆ ಭೇಟಿ ನೀಡಿ ಸೇವಾಧಾಮ ಪುನಃಶ್ಚೇತನ ಕೇಂದ್ರದ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿ ಅಲ್ಲಿಗೆ ಬಂದು ದಾಖಲಾಗಲು ಸೂಚಿಸಿದರು.

ಇದೀಗ ಅವರು ಒಂದು ತಿಂಗಳ ಪುನಃಶ್ಚೇತನ ಕಾರ್ಯ ಪೂರ್ಣಗೊಳಿಸಿ ಮನೆಗೆ ಮರಳಿರುತ್ತಾರೆ. ನಾವು ಕೂಡ ಸ್ವಾವಲಂಬಿ, ಸ್ವಾತಂತ್ರ್ಯವಾಗಿ ಜನಸಾಮಾನ್ಯರಂತೆ ಜೀವನ ನಡೆಸಬಹುದು ಎನ್ನುವುದನ್ನು ಸೇವಾಧಾಮ ಸಂಸ್ಥೆಯಿಂದ ಮನವರಿಕೆ ಮಾಡಿ ಕೊಡಲಾಯಿತು.

ಅಪಘಾತದ ನಂತರ ಅಸಹಾಯಕ ಸ್ಥಿತಿಯಲ್ಲಿದ್ದ ಇವರು ಮತ್ತೆ ಜೀವನೋಪಾಯಕ್ಕಾಗಿ ಏನಾದರೂ ಉದ್ಯೋಗ ಮಾಡಬೇಕೆಂದಿದ್ದರು. ಆಗ ಅವರಿಗೆ ಆಸರೆಯಾಗಿದ್ದು ಸೇವಭಾರತಿ ಸೇವಾಧಾಮ ಸಂಸ್ಥೆ. ಮನೆಯಲ್ಲೇ ಸ್ವ ಉದ್ಯೋಗ ಮಾಡುವ ಅವಕಾಶ ಕಲ್ಪಿಸಿಕೊಟ್ಟು ಅದಕ್ಕಾಗಿ ಹತ್ತಿಯಿಂದ ಬತ್ತಿ ಮಾಡುವ ಯಂತ್ರ ಮತ್ತು ಸೋಲಾರ್ ವ್ಯವಸ್ಥೆಯನ್ನು ಸಹ ನೀಡಿ ಅದರ ಬಗ್ಗೆ ಮಾಹಿತಿಯನ್ನು ಸಹ ತಿಳಿಸಿಕೊಡಲಾಯಿತು.

ಮುಂದೆ ಅವರು ಮನೆಗೆ ಬೇಕಾಗುವಷ್ಟು ಬತ್ತಿಯನ್ನು ಮಾಡಲಾರಂಭಿಸಿದರು, ನಂತರ ಊರಿನ ಸಮೀಪದ ಮನೆಗಳಿಗೆ ಅವಶ್ಯಕತೆಗನುಗುಣವಾಗಿ ಬತ್ತಿ ಸಿದ್ಧಪಡಿಸಿ ನೀಡಲಾರಂಭಿಸಿದರು. ಅವರು ನೀಡುತ್ತಿದ್ದ ಉತ್ತಮ ಗುಣಮಟ್ಟದ ಬತ್ತಿಯನ್ನು ಅನೇಕ ಅಂಗಡಿ ಮುಂಗಟ್ಟುಗಳಲ್ಲಿ ಮಾರಾಟಕ್ಕೆ ಮುಂದಾದರು, ಒಂದು ದಿನಕ್ಕೆ ಸುಮಾರು 5000 ಬತ್ತಿ ಮಾಡಿ ಒಂದು ಸಾವಿರ ಬತ್ತಿಗೆ 70 ರೂಪಾಯಿಯಂತೆ ದಿನಕ್ಕೆ 350 ರೂಪಾಯಿ ಪಡೆಯುತ್ತಿದ್ದರು. ಇದುವೇ ಮುಂದುವರೆದು ಕಾಲಕ್ರಮೇಣ ತಿಂಗಳಿಗೆ ಸರಿ ಸುಮಾರು 10,000 ರೂಪಾಯಿ ಆದಾಯ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವರ ಒಂದು ಈ ಆತ್ಮಬಲ ಅನೇಕ ಜನರಿಗೆ ಮಾದರಿಯಾಗಿದೆ.

ಸಾಧಿಸಬೇಕೆಂಬ ಛಲ, ಅದಕ್ಕೆ ಪೂರಕ ಮನೋಬಲ ನಮ್ಮಲ್ಲಿದ್ದರೆ ನ್ಯೂನ್ಯತೆಗಳು ಅಡ್ಡಿಯಾಗದು ಎಂಬುದಕ್ಕೆ ಬಾರ್ಕೂರು ದಿನೇಶ್ ಶೆಟ್ಟಿ ಪ್ರೇರಣೆಯಾಗಿ ನಿಲ್ಲುತ್ತಾರೆ.